ಸಿ.ಜೆ. ಹಳ್ಳಿಯ ಮೂಲಕ ಹೋಗದಿರುವ ಕೆಎಸ್ಆರ್‌ಟಿಸಿ ಬಸ್ಸು

1230 (128): ಶ್ರೀ ಕೆ.ಪಿ. ರವೀಂದ್ರನಾಥ ಬಾಬು (ಕೊಟ್ಟೂರ್):–

ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಬೆಂಗಳೂರು – ಬಾಗಲಕೋಟೆ ಸಾರಿಗೆಯು ರಾಷ್ಟ್ರೀಯ ಹೆದ್ದಾರಿ 13 ಮತ್ತು 4 ರಲ್ಲಿ ಕಾರ್ಯಾಚರಣೆಯಾಗುತ್ತಿದ್ದು, ಈ ಸದರಿ ಸಾರಿಗೆಯು ವಯಾ ಚಿಕ್ಕಜೋಗಿಹಳ್ಳಿ ಮಾರ್ಗವಾಗಿ ಮಂಜೂರಾಗಿದ್ದರೂ, ಚಿಕ್ಕಜೋಗಿಹಳ್ಳಿಗೆ ಹೋಗುತ್ತಿಲ್ಲ;

ಆ. ಈ ಸದರಿ ಸಾರಿಗೆಯು ವಯಾ ಚಿಕ್ಕಜೋಗಿಹಳ್ಳಿ ಮಾರ್ಗವಾಗಿ ಹೋಗದಿರಲು ಕಾರಣವೇನು ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):–

ಅ. ಬೆಂಗಳೂರು – ಬಾಗಲಕೋಟೆ ಸಾರಿಗೆಯು ದಿನಾಂಕ 8–2–93 ರಿಂದ ಚಿಕ್ಕಜೋಗಿಹಳ್ಳಿ ಮಾರ್ಗವಾಗಿ ಓಡಿಸಲಾಗುತ್ತಿದೆ.

ಆ. ಉದ್ಭವಿಸುವುದಿಲ್ಲ.

ಅಬಕಾರಿ ಇಲಾಖೆಯಲ್ಲಿ ಶ್ವಾನದಳ

1231 (130): ಶ್ರೀ ಕೆ.ಪಿ. ರವೀಂದ್ರನಾಥ ಬಾಬು (ಕೊಟ್ಟೂರ್):–

ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಅಬಕಾರಿ ಇಲಾಖೆಯಲ್ಲಿ ಒಂದು ಶ್ವಾನದಳ ಇದೆಯೋ;

ಆ. ಅಬಕಾರಿ ಇಲಾಖೆಯು ಪತ್ತೆ ಹಚ್ಚಲಾರದಂತಹ ಕಳ್ಳಭಟ್ಟಿ ತಾಣಗಳನ್ನು ಒಂದು ನಾಯಿಯು ಬೇಲೂರು ಅರಣ್ಯದಲ್ಲಿನ ಕಳ್ಳಬಟ್ಟಿ ಸ್ಥಳವನ್ನು ಮೂರು ದಿನಗಳಲ್ಲಿ ಪತ್ತೆ ಹಚ್ಚಿರುವುದು ನಿಜವೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ. ಇಲ್ಲ

ಆ. ಇಂತಹ ವಿಷಯ ಯಾವುದೂ ಇಲಾಖೆಯ ಗಮನಕ್ಕೆ ಬಂದಿರುವುದಿಲ್ಲ.

ಪರಿಸರ ಮಾಲಿನ್ಯ ನಿರ್ಮೂಲನೆಗೆ ಸರ್ಕಾರದ ಕ್ರಮ

1232 (145): ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ):–

ಮಾನ್ಯ ವಿಜ್ಞಾನ, ತಂತ್ರಜ್ಞಾನ, ಜೀವಿಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ ಇಲಾಖೆ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಪರಿಸರ ಮಾಲಿನ್ಯವನ್ನು ನಿರ್ಮೂಲನೆ ಮಾಡಲು ಸರ್ಕಾರದವರು ಕೈಗೊಂಡ ಕಾರ್ಯಕ್ರಮಗಳೇನು;

ಆ. 1992ನೇ ಡಿಸೆಂಬರ್ ಅಖೈರುವರೆಗೆ ಯಾವ ಯಾವ ಸಂಸ್ಥೆಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿದೆ. (ಪೂರ್ಣ ವಿವರ ನೀಡುವುದು);